ಶ್ರೀ ಟಿ. ಹನುಮಯ್ಯನವರು.—"Whether there is any time limit for an official in the Medical Department for retention at a place" ಎಂದು ನಾನು ಕೇಳಿರತಕ್ಕ ಪ್ರಶ್ನೆಗೆ "generally three years" ಎಂದು ಉತ್ತರ ಕೊಟ್ಟಿದ್ದೀರಿ. ಹಾಗಾದಮೇಲೆ 3 ವರ್ಷಗಳಿಗಿಂತಲೂ ಮೇಲಾಗಿರತಕ್ಕವರನ್ನು ಅದೇ ಸ್ಥಳದಲ್ಲಿ ಏತಕ್ಕೆ ಇಟ್ಟಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—'ಸಾಧಾರಣವಾಗಿ ಮೂರು ವರ್ಷಗಳು' ಎಂದು ಹೇಳಿರುತ್ತೆ. ದಕ್ಷರಾಗಿ ವಿಶ್ವಾಸ ಜನರ ವಿಶ್ವಾಸವನ್ನು ಹೆಚ್ಚು ಗಳಿಸಿರತಕ್ಕಂಥವರು ಕೊಂಚಕಾಲ ಹೆಚ್ಚಾಗಿ ಒಂದೇ ಸ್ಥಳದಲ್ಲಿ ಇರುತ್ತಾರೆ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಜನರ ವಿಶ್ವಾಸಿಗಳಾಗಿದ್ದರೆಂಬುದನ್ನು ಯಾವ ಆಧಾರದ ಮೇಲೆ ನಿರ್ಧರಮಾಡುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಮ್ಮಂಥವರು ಒಂದು ಹೇಳುತ್ತಿರುವದೇ ಆಧಾರ.

ಶ್ರೀ ಟಿ. ಹನುಮಯ್ಯನವರು.—ಯಾರು ಹಾಗೆ ಜನರ ವಿಶ್ವಾಸಗಳಿಸಿರುತ್ತಾರೆಂಬ ಬಗ್ಗೆ ಅವರ ಹೆಸರನ್ನು ದಯವಿಟ್ಟು ತಿಳಿಸಲಾಗುತ್ತದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಜನರಲ್ ಆಗಿ ಯಾರ್ಯಾರು ಪಾಪ್ಯುಲರ್ ಆಗಿರುತ್ತಾರೋ ಅಂಥವರನ್ನು ರೀಜೇನ್ ಮಾಡಿಕೊಂಡಿದೆ.

ಶ್ರೀ ಟಿ. ಹನುಮಯ್ಯನವರು.—ನನ್ನ (ಸಿ) ಪ್ರಶ್ನೆಗೆ 'No' ಎಂದು ಉತ್ತರ ಕೊಟ್ಟಿದ್ದೀರಿ. ಈ ಬಗ್ಗೆ ತಾವೇ ನಾವಾದರೂ ವರದಿಯನ್ನು ತರಿಸಿಕೊಂಡಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಂಥಾದ್ದು ಯಾವುದೂ ಇಲ್ಲವೆಂಬುದಾಗಿ ತಿಳಿದು ಬಂತು. ಇದು ಕೇವಲ ಸಣ್ಣ ವಿಚಾರ.

ಶ್ರೀ ಟಿ. ಹನುಮಯ್ಯನವರು.—ಆ ರೀತಿಯಾಗುತ್ತಿಲ್ಲ ಎಂಬುದನ್ನು ತಾವು ಯಾರಿಂದ ತಿಳಿದುಕೊಂಡಿರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳನ್ನೂ ಮತ್ತು ಆಜೂಬಾಜೂ ಇರತಕ್ಕ ಜನಾನಗೀ ಜನರನ್ನು ಕೇಳಿ ತಿಳಿದುಕೊಂಡಿದೆ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಚಿತ್ರದುರ್ಗದ ಡಿಸ್ಪೆನ್ಸರಿ ಹಾಸ್ಪಿಟಲ್‌ನಲ್ಲಿ ಡಾಕ್ಟರುಗಳು ಕೋಮುವಾರು ಭಾವನೆ ತೋರಿಸುತ್ತಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಟಿ. ಹನುಮಯ್ಯನವರು.—ಸಾಧಾರಣವಾಗಿ ಮೂರು ವರ್ಷಗಳ ಕಾಲಕ್ಕಿಂತ ಮೇಲಾಗಿರತಕ್ಕವರು, ಆರು ವರ್ಷಗಳಾಗಿ ಇರತಕ್ಕಂಥವರನ್ನೆಲ್ಲಾ ಇಲ್ಲಿಂದ ವರ್ಗಮಾಡುವುದಕ್ಕೆ ಏರ್ಪಾಡು ಮಾಡುತ್ತಿರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ವಿಚಾರ ಮಾಡುತ್ತೇನೆ. ಈ ಬಗ್ಗೆ ಸೀನಿಯರ್ ಸರ್ಜನ್‌ರವರಿಗೆ ವಿಚಾರ ತಿಳಿಸಲಾಗುತ್ತೆ.

ಶ್ರೀ ಟಿ. ಹನುಮಯ್ಯನವರು.—ಅಲ್ಲಿ ಆಡಳಿತ ವಿಚಕ್ಷಣೆ ಸಹ ಸರಿಯಾಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ.

ಶ್ರೀ ಟಿ. ಹನುಮಯ್ಯನವರು.—ಅಲ್ಲಿ ಈಗ ಒಂದು ರೂಪಾಯಿ ಲಂಚ ಕೊಟ್ಟಾಗ್ಯೂ ಸಹ ತೆಗೆದುಕೊಳ್ಳುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇದು ನಿರಾಧಾರವಾದ ದೂರು.

ಶ್ರೀ ಟಿ. ಹನುಮಯ್ಯನವರು.—ಇದೇ ವಿಚಾರವಾಗಿ ಈ ಮಾನ್ಯ ಸಭೆಯ ಸದಸ್ಯರೊಬ್ಬರು ಸೀನಿಯರ್ ಸರ್ಜನ್‌ರವರ ವಿಚಾರದಲ್ಲಿ ಒಂದು ಬಿಕರಿಂಗ ಹೇಳಿಕೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬಂದಿದೆ.

ಶ್ರೀ ಟಿ. ಹನುಮಯ್ಯನವರು.—ಆ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವೆಲ್ಲವನ್ನೂ ಕೈಗೊಂಡಿದ್ದೇವೆ. ಒಂದು ಪ್ರೆಸ್ ನೋಟ್ ಸಹ ಈ ಬಗ್ಗೆ ಹೊರಡಿಸಲಾಗಿದೆ.

Purchase of D. D. T. during 1949-50 and 1950-51.

*Q.—174. **Sri Kadidal MANJAPPA** (Shimoga-District—General).—

Will the Government be pleased to state :—

(*a*) the total quantity and the cost of D. D. T. purchased during the year 1949-50 and 1950-51 ;

(*b*) the concern from which the D. D. T. is being purchased ;

(*c*) the person or authority who purchased the D. D. T. ?

The Hon'ble Sri K. T. BHASHYAM (Minister for Law and Labour).—

(*During 1949-50 for 9 months.*)

(*a*) 31 tons—916 lbs. D.D.T. at a cost of Rs. 1,76,884-4-8 ; 26 tons of Geigy's wettable powder—cost Rs. 1,27,400 ; Torch-brand D.D.T. 1,040 gallons at a cost of Rs.26,754-10-0.

During 1950-51

Ten and a quarter tons of D.D.T. during 1950-51 at a cost of Rs. 50,609-12-8.

(*b*) (1) Director-General of Disposals.

(2) Messrs. Geigy Insecticides, Ltd., Bombay.

(3) Imperial Chemical Industries (India), Ltd., Bombay.

(4) Progressive Chemical Corporation, Ltd., Bombay.

(*c*) Secretary, Stores Purchase Committee, as regards the firms and direct purchase as regards Government of India.

Sri Kadidal MANJAPPA.—Is there any permanent agreement between these several concerns for the purchase of D.D.T. or are orders placed with them for the material whenever D.D.T. is required?

The Hon'ble Sri K. T. BHASHYAM.—Orders are placed whenever D.D.T. is required.

Sri Kadidal MANJAPPA.—Has it come to the notice of the Government that there is a lot of irregularities in the spraying of D.D.T. in the areas where it has to be sprayed?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಂದೆರಡು ಪೇಳೆ ಆ ಕಣ್ಸೆಕ್ಟ್‌ಮೆಂಟ್ ಬರುವುದು ನಿಧಾನವಾಗಿ ಹಾಗಾಗಿತ್ತು. ಈಗ ಎಲ್ಲವೂ ಸರಿಯಾಗಿ ನಡೆಯುತ್ತಿದೆ.

Sri Kadidal MANJAPPA.—Is there any Committee functioning even today?

The Hon'ble Sri K. T. BHASHYAM.—Yes. It is functioning—sometimes over-well.

Sri Kadidal MANJAPPA.—Though it is strictly not relevant for the purpose of this question, I want to know the names of the members of that Committee.

The Hon'ble Sri K. T. BHASHYAM.—I could not tell the Hon'ble Member.

Sri Kadidal MANJAPPA.—Was there a proposal to instal a D. D. T. plant at Bangalore?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಿಂದೆ ಇತ್ತು. ಈಗ ಅದನ್ನು ನಿಲ್ಲಿಸಿರುತ್ತೆ.

Sri Kadidal MANJAPPA.—Why?

The Hon'ble Sri K. T. BHASHYAM.—Because it is a costly thing and besides we do not get the necessary plant. There are several firms working in India which can supply us.

Sri Kadidal MANJAPPA.—Is not the cost of the plant only Rs. 15 lakhs?

The Hon'ble Sri K. T. BHASHYAM.—I could not tell the Hon'ble Member. I want notice.

Sri Kadidal MANJAPPA.—In view of the requirements of the State and outside the State in India, have the Government thought of installing a plant for manufacturing D.D.T. so that we may have our requirements manufactured here alone?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಿಂದೆ ಆ ರೀತಿ ಇದನ್ನು ಸ್ಥಾಪಿಸಬೇಕೆಂಬ ಒಂದು ಅಭಿಪ್ರಾಯ ಏತ್ತು. ಆದರೆ ಇತ್ತೀಚೆಗೆ ಯಂತ್ರ ಸಾಮಗ್ರಿಗಳು ದೊರೆಯುವುದು ತುಂಬಾ ಕಷ್ಟವಾಗಿರುವುದರಿಂದಲೂ, ಮತ್ತೂ ಇದು ನಮಗೆ ಸರಾಗವಾಗಿ ಸರಬರಾಯಿ ಆಗುತ್ತಿರುವುದರಿಂದಲೂ ಅಂಥ ಅಗತ್ಯ ಕಂಡು ಬಂದಿರಲಿಲ್ಲ. ತಾವು ಈಗ ಹೇಳಿದ್ದರ ಮೇಲೆ ಅದನ್ನು ಆಲೋಚನೆ ಮಾಡಲಾಗುತ್ತೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಈಗ ತಾವು ತರಿಸುತ್ತಿರುವ ಡಿ. ಡಿ. ಟಿ. ಯಲ್ಲಿ ಅನೇಕ ತೆರನಾದ ಲೋಪ ದೋಷಗಳಿರುತ್ತವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾವು ತರಿಸತಕ್ಕ ಡಿ. ಡಿ. ಟಿ. ಯೆಲ್ಲಾ ಸಮರ್ಪಕವಾಗಿಯೆ ಇರುತ್ತೆ. ಎಲ್ಲಿಯಾದರೂ ಒಂದೆರಡು ಕಡೆ ಕೊಂಚ ವ್ಯತ್ಯಾಸಕಂಡು ಬಂದ್ದಿದ್ದರೂ ಇರಬಹುದು.

ಶ್ರೀ ಕಡಿದಾಳ್ ಮಂಜಪ್ಪನವರು.—ತಾವು ಈ ಡಿ. ಡಿ. ಟಿ.ಯನ್ನು ತರಿಸತಕ್ಕ ಕಾಲದಲ್ಲಿ ಅವನ್ನು ಪರೀಕ್ಷೆ ಮಾಡಿ ನೋಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾವು ಆರ್‌ಡರ್ಸ್ ಪ್ಲೇಸ್ ಮಾಡುವಾಗ್ಗೆ ಕೊಡತಕ್ಕ ಸ್ಪೆಸಿಫಿಕೇಷ್ ಪ್ರಕಾರವೇ ಅವರು ನಮಗೆ ಕಣ್ಸೈಕ್ಟ್‌ಮೆಂಟನ್ನು ಕಳುಹಿಸಿಕೊಡುತ್ತಿದ್ದಾರೆ. ಆದರೆ ಒಂದೆರಡು ಕಣ್ಸೈಕ್ಟ್‌ಮೆಂಟ್‌ಗಳು ಸಕಾಲದಲ್ಲಿ ಬಾರದೆ ನಿಂತು ಹೋಗಿದ್ದವು, ಅಷ್ಟೆ.

ಶ್ರೀ ಕಡಿದಾಳ್ ಮಂಜಪ್ಪನವರು.—ತಾವು ಕೇಳಿರತಕ್ಕ ದರ್ಜೆಯ ಡಿ. ಡಿ. ಟಿ. ಬಾರದೆ ಬಹಳ ಕೀಳು ದರ್ಜೆಯದು ಬರುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಎಲ್ಲೋ ಒಂದೆರಡು ಸಂದರ್ಭಗಳಲ್ಲಿ ಹಾಗೆ ಆಗಿತ್ತು. ಆದರೆ ಇತ್ತೀಚೆಗೆ ಬರತಕ್ಕ ಎಲ್ಲಾ ಕಣ್ಸೈಕ್ಟ್‌ಮೆಂಟುಗಳೂ ಒಂದೇ ರೀತಿಯಲ್ಲಿರುತ್ತವೆ.

ಶ್ರೀ ಕಡಿದಾಳ್ ಮಂಜಪ್ಪನವರು.—ತಾವು ಈ ಡಿ. ಡಿ. ಟಿ. ಯ ಬೆಲೆಯನ್ನು ಯಾವ ಆಧಾರದ ಮೇಲೆ ನಿರ್ಧರ ಮಾಡುತ್ತೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸ್ಟೋರ್ಸ್ ಪರ್ಚೇಸ್ ಕಮಿಟಿ ಎಂದು ಇದೆ. ಅವರು ಅನೇಕ ಫರ್ಮುಗಳಿಂದ ಬೆಲೆಗಳನ್ನು ತರಿಸಿ, ಅದರಲ್ಲಿ ಕಮ್ಮಿ ಯಾವುದಿರುತ್ತೋ ಅದರ ಆಧಾರದ ಮೇಲೆ ನಿರ್ಧರ ಮಾಡುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಇದಕ್ಕಾಗಿ 'ಆ ಸ್ಟೋರ್ಸ್ ಪರ್ಚೇಸ್ ಕಮಿಟಿ ಎಂಬುದೊಂದಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇದೆ.

Sri D. H. CHANDRASEKHARAIYA (Chitaldrug District—General).—Is DDT manufactured in any place in India at present?

The Hon'ble Sri K. T. BHASHYAM.—I have no idea. We place orders with some of these firms and they supply us.

Sri D. H. CHANDRASEKHARAIYA.—Is there any difficulty in getting the supply from any of these firms?

The Hon'ble Sri K. T. BHASHYAM.—There is some difficulty latterly.

Sri D. H. CHANDRASEKHARAIYA.—Will it not be useful to instal a plant of our own to manufacture the required quantity of DDT so that malaria

(SRI D. H. CHANDRASEKHARAIYA)

which is prevailing in different parts of the State can be eradicated ?

The Hon'ble Sri K. T. BHASHYAM.— We were getting DDT easily till now. Therefore we did not think of a plant. When there was difficulty, we thought of a plant and because of the prohibitiveness of the cost of installing a plant and its non-availability, it was deferred. Now we are thinking of having a plant again. Perhaps we can put up a plant.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).— ಒಂದೆರಡು ಕಣಸ್ಟ್ರಕ್ಷನ್‌ಮೆಂಟುಗಳಲ್ಲಿ ಸ್ಪೆಸಿಫಿಕೇಷನ್‌ಗೆ ಸರಿಯಾಗಿ ಬಂದಿರಲಿಲ್ಲವೆಂದು ತಾವು ತಿಳಿಸಿದಿರಿ. ಹಾಗೆ ಸರಿಯಾಗಿ ಬಾರದೆ ಇದ್ದುದರ ಬಗ್ಗೆ ತಾವು ಏನು ಕಾರ್ಯಕ್ರಮಗಳನ್ನು ಕೈಗೊಂಡಿರಿ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೆಲವು ಕ್ರಿಮಿ ಕೀಟಗಳಿಗೆ ಸ್ಪ್ರಾಂಗ್ ಆಗಿರತಕ್ಕ ಡಿ.ಡಿ.ಟಿ. ಬೇಕು. ಕೆಲವಕ್ಕೆ ಅಷ್ಟು ಸ್ಪ್ರಾಂಗ್ ಆದ್ದು ಬೇಕಾಗುವುದಿಲ್ಲ. ಇಂಥ ದ್ದಕ್ಕೇ ಆ ಕಮ್ಮಿ ದರ್ಜೆಯನ್ನು ಉಪಯೋಗ ಮಾಡ ಲಾಯಿತು. We had placed an order at Rs. 2-12-0 per pound ; now they want Rs. 3-5-0 per pound and therefore we are forced to reject that and take it from somebody else.

ಶ್ರೀ ಎಚ್. ಸಿದ್ದವೀರಪ್ಪನವರು.—ಹಿಂದೆ ಒಂದೆರಡು ವರ್ಷಗಳಲ್ಲಿ ಬರುತ್ತಿದ್ದ ಡಿ. ಡಿ. ಟಿ. ಯಿಂದ ಆಗುತ್ತಿದ್ದಷ್ಟು ಪ್ರಯೋಜನ ಈಗ ಬರುತ್ತಿರುವ ಡಿ. ಡಿ. ಟಿ. ಯಲ್ಲಿ ಆಗುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ? ಮತ್ತು ಇದು ಬಹಳ ಕೀಳು ದರ್ಜೆಯದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ ಭಾಷ್ಯಂರವರು.—ಒಂದೆರಡು ಸಂದರ್ಭಗಳಲ್ಲಿ ವಾಸ್ತವ ಹಾಗಾಗಿದೆಯೆಂದು ತಿಳಿಸಿದೆ. ಬಾಕೀದೆಲ್ಲಾ ಸರಿಯಾಗೇ ಬರುತ್ತಿವೆ. ಅದರೆ ಇವು ಗಳ ಬೆಲೆಯ ವಿಚಾರದಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಕೆಲವರು ಹೊಸದಾಗಿ ಇದನ್ನು ಸರಬರಾಯಿ ಮಾಡಲು ಒಪ್ಪಿದ್ದಾರೆ. ಆದರೆ ಅವರಿಗೆ ಇನ್ನೂ ಲೈಸನ್ಸ್ ಇಲ್ಲ. ಆದರೆ ಒಳ್ಳೆಯಮಾಲು ದೊರೆಯತಕ್ಕ ಬಗ್ಗೆ ಯಾವ ತೊಂದರೆಯೂ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು. —ಹೀಗೆ ಅವರು ಕೆಲವು ಹೆಚ್ಚು ಇಫೆಕ್ಟಿವ್ ಆಗಿಲ್ಲದ ಸಾಮಗ್ರಿಗಳನ್ನು ತಳುಹಿಸಿರತಕ್ಕ ಬಗ್ಗೆ ಸರ್ಕಾರದವರು ಏನಾದರೂ ಒಂದು ವಿಚಾರಣೆ ಮಾಡಿದ್ದಾರೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಂಥ ವಿಚಾರಣೆ ಯಾವುದನ್ನು ಮಾಡಿಲ್ಲ. ಡಿ. ಡಿ. ಟಿ.ಯನ್ನು ಈಗೀಗ ತರಿಸಿ ನಾವು ಪ್ರಯೋಗ ಮಾಡುತ್ತಿದ್ದೇವೆ. From the 1st of April we will take it up in the right earnest.

ಶ್ರೀ ಎಚ್. ಸಿದ್ದವೀರಪ್ಪನವರು.— ಈಗ ಬರತಕ್ಕ ದೂರುಗಳೆಲ್ಲ ತಾವು ತರಿಸುತ್ತಿರುವ ಡಿ. ಡಿ. ಟಿ. ಯು ಮೊದಲು ಮೊದಲು ತರಿಸುತ್ತಿದ್ದ ಡಿ. ಡಿ. ಟಿ. ಯಷ್ಟು ಇಫೆಕ್ಟಿವ್ ಆಗಿಲ್ಲವೆಂಬುದೇ ಅಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತರಿಸಿದಾಗ ಇಫೆಕ್ಟಿವ್ ಆಗಿದ್ದು, ನಂತರ ಅದು ಇ ಇಫೆಕ್ಟಿವ್ ಆಗಲು ಅವಕಾಶವಿದೆ. ಆ ರೀತಿ ಆಗಬಾರದು ಏಕೆಂದರೆ ಅದನ್ನು ಉಪಯೋಗಿಸುವುದರಲ್ಲಿ ಸ್ವಲ್ಪ ನಿಧಾನ ಮಾಡಿದರೆ, ಅದರಲ್ಲಿ ಆಗ ಅಷ್ಟು ಇಫೆಕ್ಟ್ ಇಲ್ಲದೆ ಇರಬಹುದು.

ಶ್ರೀ ಎಚ್. ಸಿದ್ದವೀರಪ್ಪನವರು.—ಈಗ ಡಿ. ಡಿ. ಟಿ. ಪ್ರಯೋಗದಿಂದ ಮಲೆನಾಡಿನಲ್ಲಿ ಎಷ್ಟು ಪ್ರಯೋಜನ ವಾಗುತ್ತಿದೆಯೋ ಮೈದಾನದಲ್ಲೂ ಅಷ್ಟೇ ಪ್ರಯೋಜನ ವಾಗುತ್ತಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಗುತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಮೈದಾನಕ್ಕೂ ಡಿ. ಡಿ. ಟಿ. ಸರಬರಾಯಿ ಮಾಡುತ್ತಿದ್ದೀರಾ ?

ಮಾನ್ಯ ಶ್ರೀ ಕೆ. ಟಿ ಭಾಷ್ಯಂರವರು.—ಮೊದಲು ಮಲೆನಾಡು ಪ್ರದೇಶಕ್ಕೆ ಸರಬರಾಯಿಮಾಡಿ ಹೆಚ್ಚಾಗಿ ದ್ದರೆ ಮೈದಾನಕ್ಕೂ ಕೊಡುತ್ತೇವೆ. ಹೆಚ್ಚಾಗಿ ಹೊರ ಗಿನಿಂದ ಬಂದರೆ ಮೈದಾನಕ್ಕೂ ಹೆಚ್ಚು ಕೊಡುತ್ತೇವೆ.

ಶ್ರೀ ಬಿ. ಎಚ್ ಬೋರಣ್ಣಗೌಡರು (ಹಾಸನ ಜಿಲ್ಲೆ).— ನಾಲ್ಕು ಕಂಪೆನಿಗಳಿಂದ ಡಿ. ಡಿ. ಟಿ. ತರಿಸುತ್ತೇವೆಂದು ಹೇಳಿದಿರಿ. ಹಾಗಾದರೆ ಅಮೇರಿಕಾದಿಂದ ತರಿಸುತ್ತಿರಾ ?

The Hon'ble Sri K. T. BHASHYAM.— I have no idea wherefrom they get.

ಶ್ರೀ ಬಿ. ಎಚ್. ಬೋರಣ್ಣಗೌಡರು.— ಈಗ ಅಮೇರಿ ಕಾದ ರಾಕ್‌ಫೆಲರ್ ಇನ್‌ಸ್ಟಿಟ್ಯೂಟ್‌ನವರು 50 ಟಿಕ ಡಿ. ಡಿ. ಟಿ. ಯನ್ನು ನಮಗೆ ಉಚಿತವಾಗಿ ಕೊಡುತ್ತೇ ವೆಂದು ಹೇಳಿದ್ದುದು ಬಂದಿದೆಯೆ ?

The Hon'ble Sri K. T. BHASHYAM.— I have no idea. I must see the papers.

ಶ್ರೀ ಬಿ. ಎಚ್. ಬೋರಣ್ಣಗೌಡರು.—ನಾವು ಡಿ.ಡಿ. ಟಿ. ಯನ್ನು ತಯಾರು ಮಾಡುವುದಕ್ಕೆ ಪ್ರಯತ್ನಿಸುತ್ತಿ ದ್ದಾಗ ಮೈಸೂರಿಗೆ ಉಚಿತವಾಗಿ 50 ಟಿಕ ಡಿ. ಡಿ. ಟಿ. ಕೊಡುತ್ತೇವೆಂದು ಅಮೇರಿಕಾದವರು ಹೇಳಿರಲಿಲ್ಲವೆ ?

The Hon'ble Sri K. T. BHASHYAM.— I must see the papers, I do not know about it.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಡಿ. ಡಿ. ಟಿ. ಯು ಎಷ್ಟು ಪರಿಣಾಮಕಾರಿಯಾಗಿರಬೇಕೋ ಅಷ್ಟು ಈಗ ಬರುತ್ತಿರುವುದು ಇಲ್ಲ, ಇದರಿಂದ ಸಾಕಷ್ಟು ಪ್ರಯೋಜನವಾಗುತ್ತಿಲ್ಲ, ಆ ಪೌಡರ್ ನೀರಿನಂತೆ ಮಾಡಿ ಕಳುಹಿಸುತ್ತಿರುವುದರಿಂದ ತಕ್ಕಷ್ಟು ಸಹಾಯ ವಾಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಆಗು ತ್ತಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಡಿ. ಡಿ. ಟಿ. ಎಷ್ಟು ಬೇಕೋ ಅಷ್ಟು ಬಾರದಿರುವುದರಿಂದ ಡಿಟೀರಿ ಯೊರೇಟ್ ಆಗಿದೆ ಎಂಬುದು ಗೊತ್ತಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅದನ್ನು ಸರಿ ಪಡಿಸುವುದಕ್ಕೆ ಏನು ಮಾಡುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಡಿ. ಡಿ. ಟಿ. ಯನ್ನು ಹೆಚ್ಚಾಗಿ ತರಿಸುತ್ತೇವೆ.

Sri V. M. MASCARENHAS (Bangalore Retroceded Area—General).—Is it not desirable to import this direct from the manufacturers in Europe or America ?

The Hon'ble Sri K. T. BHASHYAM.— Since local firms are supplying at competitive rates there is no need for us to import this direct from foreign countries.

Sri V. M. MASCARENHAS.—Then is it not desirable to bind the local suppliers to see that supplies are regularly and correctly made?

The Hon'ble Sri K. T. BHASHYAM.—I have no doubt they are regularly supplied. As already pointed out, the order was placed at Rs. 2-12-0 per pound. Now the Government of India are urging that we must pay at the rate of Rs. 3-5-0 per pound. That means increased cost. There is a competitive firm called the Imperial Chemical Industries which are willing to supply us at Rs. 2-12-0 per pound. So we placed an order for 20 tons, but that firm wants an import license before we could get our supply. We have addressed the Government of India and we have not yet got the import license. As soon as we get it we get the supply of 20 tons.

Sri V. M. MASCARENHAS.—Could not the Government of Mysore get the import license direct and then deal with the Chemical Industries?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾವು ತರಿಸಿದರೂ ಒಂದೇ, ಅವರೇ ಸರಬರಾಯಿ ಮಾಡಿದರೂ ಒಂದೇ. ನಮಗೆ ಅವರು ಮಾಡಿಕೊಳ್ಳುವುದಕ್ಕೆ ಲೈಸನ್ಸ್ ಇಂಡಿಯಾ ಸರ್ಕಾರದಿಂದ ದೊರೆಯುತ್ತದೆ. ಆದರೆ ಸ್ವಲ್ಪ ತಡವಾಗುತ್ತದೆ.

Mr. SPEAKER.—Question No. 182 Sri Rangaramiah.

Sri M. MADIAH (Mysore District—Depressed Class).—I would request the Chair to permit me to put that question.

Mr. SPEAKER.—The request must come in writing from the Hon'ble Member who tabled the question.

Sri M. MADIAH.—Even otherwise the Chair can permit another Member to put the question. This is an important one as it relates to leprosy. I therefore request the Chair to allow me to put the question on behalf of Sri Rangaramiah who is not present.

Mr. SPEAKER.—Yes, as a special case, the Hon'ble Member may do so.

Arrangements made for treatment of persons affected by leprosy.

*ಪ್ರಶ್ನೆ 182.—ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ) [On behalf of ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆಸ್ಥಾನ].—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಕುಷ್ಠರೋಗ ಪೀಡಿತರಾದ ಜನಗಳ ಸಂಖ್ಯೆಯನ್ನು ಕಂಡುಹಿಡಿಯಲು ಸರ್ಕಾರದವರು ಯಾವುದಾದರೂ "ಸರ್ವೆ" ಪರಿಶೀಲನೆಯನ್ನು ನಡೆಯಿಸಿದ್ದಾರೆಯೆ;

(b) ನಡೆಯಿಸಿದ್ದ ಪಕ್ಷದಲ್ಲಿ ಅವರ ಸಂಖ್ಯೆಯೆಷ್ಟು, ಮತ್ತು ಸಂಸ್ಥಾನದ ಯಾವ ಭಾಗದಲ್ಲಿ ಆ ರೋಗವು ಇದೆ?

(c) ಕುಷ್ಠರೋಗ ಪೀಡಿತರಾದ ಜನರಿಗೆ ಚಿಕಿತ್ಸೆ ನಡೆಯಿಸಲು ಯಾವ ಏರ್ಪಾಡುಗಳನ್ನು ಮಾಡಲಾಗಿದೆ; ಅಂಥ ರೋಗಿಗಳನ್ನು ನೋಡಿಕೊಳ್ಳುವುದಕ್ಕಾಗಿ ನೇಮಕಮಾಡಿಕೊಂಡಿರತಕ್ಕ ಡಾಕ್ಟರುಗಳ ಸಂಖ್ಯೆ ಎಷ್ಟು?

ಉತ್ತರ 182.—ಮಾನ್ಯ ಶ್ರೀ ಕೆ. ಟಿ. ಭಾಷ್ಯಂ; ರವರು (ಲಾ ಮತ್ತು ಲೇಬರ್ ಸಚಿವರು).—

(a) ಹೌದು, ನಡೆಯಿಸಿದ್ದಾರೆ. ಈ ರೋಗ ಬರತಕ್ಕಂಥ ಸಂಭವವಿರುವ ಪ್ರದೇಶದಲ್ಲಿರುವ ಕೆಲವು ಗ್ರಾಮಗಳಲ್ಲಿ.

(b) ಸುಮಾರು 300. ಈ ರೋಗ ಬರತಕ್ಕಂಥ ಸಂಭವವಿರುವ ಪ್ರದೇಶಗಳು ಯಾವುವೆಂದರೆ.—

(1) ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಚಾಮರಾಜನಗರ ಮತ್ತು ತಿರುಮಕೂಡಲು ನರಸೀಪುರ;
(2) ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳು;
(3) ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಚನ್ನಪಟ್ಟಣ
(4) ಕೋಲಾರ ಡಿಸ್ಟ್ರಿಕ್ಟಿನಲ್ಲಿ ಗೌರಿಬಿದನೂರು ತಾಲ್ಲೂಕು, ತುಮಕೂರು ಮತ್ತು ಚಿತ್ರದುರ್ಗ ಡಿಸ ್ಟ್ರಿಕ್ಟ್ಗಳಲ್ಲಿಯೂ ಮತ್ತು ಮೈಸೂರು ಡಿಸ್ಟ್ರಿಕ್ಟಿನ ನಂಜನಗೂಡು ತಾಲ್ಲೂಕಿನಲ್ಲಿಯೂ ಈ ರೋಗ ಪೀಡಿತರಾದ ಸ್ವಲ್ಪ ಮಂದಿ ಜನರಿರುವರೆಂದೂ ಸಹ ಸರ್ಕಾರಕ್ಕೆ ವರದಿ ಬಂದಿದೆ.

(c) 1. ಬೆಂಗಳೂರಿನಲ್ಲಿ ಕುಷ್ಠರೋಗಿಗಳಿಗೆ ಸಂಬಂಧಪಟ್ಟ ಒಂದು ಆಸ್ಪತ್ರೆ ಇದೆ. ಅಲ್ಲಿ 112 ಮಂದಿಗಳನ್ನಿಟ್ಟು ಚಿಕಿತ್ಸೆ ಮಾಡಲು ಸ್ಥಳವಸತಿಯನ್ನೇರ್ಪಡಿಸಲಾಗಿದೆ. ಹೊರಗಡೆಯಲ್ಲಿದ್ದುಕೊಂಡು ಚಿಕಿತ್ಸೆ ಗೋಸ್ಕರ ಆಸ್ಪತ್ರೆಗೆ ಬಂದು ಹೋಗತಕ್ಕವರ ಚಿಕಿತ್ಸೆಗಾಗಿ 'ಔಟ್-ಪೇಷೆಂಟ್ ಕ್ಲಿನಿಕ್" ಕೂಡ ಈ ಆಸ್ಪತ್ರೆಯಲ್ಲಿದೆ.

ಈ ಆಸ್ಪತ್ರೆಯ ಚಾರ್ಜಿನಲ್ಲಿ (ಗೆಜೆಟೆಡ್) ಒಂದನೆಯ ತರಗತಿಯ ಒಬ್ಬರು ಅಸಿಸ್ಟೆಂಟ್ ಸರ್ಜನರೂ, ಮತ್ತು (ನಾನ್ ಗೆಜೆಟೆಡ್ ದರ್ಜೆಯ) ಎರಡನೆಯ ತರಗತಿಯ ಒಬ್ಬರು ಅಸಿಸ್ಟೆಂಟ್ ಸರ್ಜನರೂ ಇದ್ದಾರೆ. ಕುಷ್ಠರೋಗಕ್ಕೆ ಸಂಬಂಧಪಟ್ಟ ಚಿಕಿತ್ಸಾಕಾರ್ಯದಲ್ಲಿ ಇವರಿಬ್ಬರೂ ಶಿಕ್ಷಣ (ಟ್ರೈನಿಂಗ್) ಪಡೆದಿದ್ದಾರೆ.

2. ಹೊರಗಡೆಯುಲ್ಲದ್ದುಕೊಂಡು ಚಿಕಿತ್ಸೆಗೋಸ್ಕರ ಆಸ್ಪತ್ರೆಗೆ ಬಂದು ಹೋಗತಕ್ಕವರ ಚಿಕಿತ್ಸೆಗಾಗಿ ಸಿವಿಲ್ ಸ್ಟೇಷನಿನ "ಬಾ ಡ್‌ವೇ"ಯಲ್ಲಿ ಮತ್ತೊಂದು "ಔಟ್-ಪೇಷಂಟ್ ಕ್ಲಿನಿಕ್" ಕೂಡ ಇದೆ.

3. ಚಾಮರಾಜನಗರ, ತಿರುಮಕೂಡಲು ನರಸೀಪುರ, ಹೊಸೂರು ಮತ್ತು ಮಳವಳ್ಳಿ ಈ ಸ್ಥಳಗಳಲ್ಲಿರುವ ಲೋ ಲ್ ಫಂಡ್ ಡಿಸ್ಪೆನ್ಸರಿಗಳಲ್ಲಿ ಕುಷ್ಠರೋಗಕ್ಕೆ ಸಂಬಂಧಪಟ್ಟ ಕ್ಲಿನಿಕ್ ವ್ಯವಸ್ಥೆಗಳನ್ನು ಏರ್ಪಡಿಸಲಾಗಿದೆ.